# ಹೊಸ ಜೋಡಿಯ ಪ್ರೀತಿ–ಹೋರಾಟ

‘ಗೆಳತಿ ಪ್ರಾಣ ಹಿಂಡುತಿ’ ಎನ್ನುವುದು ತರುಣರ ನಡುವಣ ಕೀಟಲೆಯ ಮಾತು. ಆದರೆ, ಇಲ್ಲೊಬ್ಬ ಹುಡುಗ ‘ಗೆಳತಿ ಪ್ರಾಣ ಕೊಡುವೆ’ ಎನ್ನುತ್ತಿದ್ದಾನೆ. ಅಂದಹಾಗೆ, ಈ ಪ್ರಾಣ ಕೊಡುವ ಘೋಷಣೆ ಸಿನಿಮಾಕ್ಕಾಗಿ! ಹೇಳಿಕೇಳಿ ಚಿತ್ರದ ಹೆಸರೇ ‘ಗೆಳತಿ ಪ್ರಾಣ ಕೊಡುವೆ’.

ಕಾರ್ಕಳದ ರಕ್ಷಾ ಶೆಣೈ ಚಿತ್ರದ ನಾಯಕಿ. ಚಲನಚಿತ್ರರಂಗದಲ್ಲಿ ಮೊದಲ ಹೆಜ್ಜೆ ಇಟ್ಟಿರುವ ರಕ್ಷಾಗೆ, ತಾವು ನಡೆಯುವ ದಾರಿಯಿನ್ನೂ ಸಾಕಷ್ಟಿದೆ ಎಂದು ತಿಳಿದಿದೆ. ಹಾಗಾಗಿಯೇ, ಈ ಚಿತ್ರದಲ್ಲಿನ ತಮ್ಮ ನಟನೆಯ ಬಗ್ಗೆ ಹೇಳಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ– ‘ಮುಂಬರುವ ಸಿನಿಮಾಗಳಲ್ಲಿ ಉತ್ತಮ ಅಭಿನಯ ನೀಡಬಲ್ಲೆ’ ಎಂದು ಹೇಳುತ್ತಾರೆ. ಮೊದಲ ಸಿನಿಮಾದಲ್ಲಿ ತನ್ನ ಬೆನ್ನು ತಟ್ಟಿದ ಚಿತ್ರತಂಡದ ಎಲ್ಲರಿಗೂ ಥ್ಯಾಂಕ್ಸ್ ಎನ್ನುವ ಅವರು, ಚೊಚ್ಚಿಲ ಸಿನಿಮಾ ತೆರೆಕಂಡ ನಂತರ ಇನ್ನಷ್ಟು ಅವಕಾಶಗಳು ಕೈಸೇರುವ ನಿರೀಕ್ಷೆಯಲ್ಲಿದ್ದಾರೆ.

ರಕ್ಷಾಗೆ ನಾಯಕಿಯಾಗಿ ನಟಿಸಿರುವ ಕಿರಣ್‌ಗೆ ಕೂಡ ಇದು ಮೊದಲ ಸಿನಿಮಾ. ಒಳ್ಳೆಯ ಚಿತ್ರತಂಡದೊಂದಿಗೆ ಕೆಲಸ ಮಾಡಿದ ಖುಷಿ ಇರುವ ಅವರಿಗೆ, ಎರಡು ಆಯಾಮಗಳ ಪಾತ್ರ ಸವಾಲೆನ್ನಿಸಿದೆ. ಸಹೋದರಿಯನ್ನು ಕಾವಲು ಕಾಯುವ ಒರಟ ಸಹೋದರರು ಹಾಗೂ ಪ್ರೇಮದ ಲಹರಿಯಲ್ಲಿ ಜಗತ್ತನ್ನೇ ಎದುರು ಹಾಕಿಕೊಳ್ಳುವ ಪ್ರೇಮಿ–ಹೀಗೆ, ಎರಡು ಎಳೆಗಳಲ್ಲಿ ಸಿನಿಮಾ ಸಾಗುತ್ತದಂತೆ.

‘ವಸಂತ್ ಮೂವಿ ಮೇಕರ್ಸ್’ ಹೆಸರಿನಲ್ಲಿ ಒಂದಷ್ಟು ಗೆಳೆಯರ ಬಳಗವೊಂದು ನಿರ್ಮಿಸಿರುವ ‘ಗೆಳತಿ ಪ್ರಾಣ ಕೊಡುವೆ’ ಚಿತ್ರದ ಶೂಟಿಂಗ್ ಈಗಾಗಲೇ ಮುಗಿದಿದೆ. ಯತೀಶ್ ಚಿತ್ರದ ನಿರ್ದೇಶಕರು. ಚಿಕ್ಕಮಗಳೂರಿನ ಇವರು ಚಿತ್ರದ ನಿರ್ಮಾಪಕರಲ್ಲಿ ಒಬ್ಬರು ಕೂಡ. ಪ್ರೇಮ–ಸಾಹಸ ಕಥನದ ತಮ್ಮ ಚಿತ್ರವನ್ನು ತೆರೆಕಾಣಿಸುವ ಹಂಬಲದಲ್ಲಿರುವ ಚಿರಂತ್, ಅದಕ್ಕೆ ಪೂರ್ವಭಾವಿಯಾಗಿ ಗೀತೆಗಳ ಧ್ವನಿಮುದ್ರಿಕೆಯನ್ನು ಬಿಡುಗಡೆ ಮಾಡಿದ್ದಾರೆ.



# ಹೊಸ ರಾಜಕುಮಾರ!



ರಾಘವೇಂದ್ರ ರಾಜಕುಮಾರ್ ಅವರ ಪುತ್ರ ವಿನಯ್ ಅಭಿನಯದ ‘ಸಿದ್ಧಾರ್ಥ’ ಚಿತ್ರ ಸೆಟ್ಟೇರಿದೆ. ಇದರೊಂದಿಗೆ ರಾಜಕುಮಾರ್ ಕುಟುಂಬದ ಮೂರನೇ ತಲೆಮಾರು ಚಿತ್ರರಂಗ ಪ್ರವೇಶಿಸಿದಂತಾಗಿದೆ.

ವಿನಯ್ ಸಿನಿಮಾ ಬಗ್ಗೆ ಕಳೆದ ಎರಡು ಮೂರು ವರ್ಷಗಳಿಂದಲೂ ಸುದ್ದಿ ಕೇಳಿಬರುತ್ತಿತ್ತು. ಆದರೆ, ಮಗನ ಸಿನಿಮಾ ಪ್ರವೇಶಕ್ಕೆ ರಾಘವೇಂದ್ರ ರಾಜಕುಮಾರ್ ತುಂಬಾ ಸಾವಧಾನದಿಂದ ನಡೆದುಕೊಂಡರು. ಈ ನಡುವೆ ಅವರ ಆರೋಗ್ಯದಲ್ಲಿ ಉಂಟಾದ ಏರುಪೇರು ಕೂಡ ಹೊಸ ರಾಜಕುಮಾರನ ಎಂಟ್ರಿ ವಿಳಂಬಕ್ಕೊಂದು ಕಾರಣವಾಯಿತು. ಇದೀಗ, ‘ಸಿದ್ಧಾರ್ಥ’ ಸೆಟ್ಟೇರಿದ್ದಾನೆ. ‘ಅಕ್ಷಯ ತೃತೀಯ’ ದಿನದಂದು ಮುಹೂರ್ತ ನಡೆದಿರುವ ಈ ಚಿತ್ರವನ್ನು ರಾಜ್ ಕುಟುಂಬವೇ ನಿರ್ಮಿಸುತ್ತಿದೆ. ಶಿವರಾಜಕುಮಾರ್, ರಾಘವೇಂದ್ರ ಹಾಗೂ ಪುನೀತ್‌ರ ಚೊಚ್ಚಿಲ ಚಿತ್ರಗಳನ್ನು ಕೂಡ ರಾಜ್ ಕುಟುಂಬವೇ ನಿರ್ಮಿಸಿತ್ತು. ಆ ಪರಂಪರೆ ಹೊಸ ತಲೆಮಾರಿಗೂ ಮುಂದುವರೆದಿದೆ. ಖುದ್ದು ಪಾರ್ವತಮ್ಮ ಮುಂದೆ ನಿಂತು ಮೊಮ್ಮಗನ ಚಿತ್ರದ ಮುಹೂರ್ತ ನೆರವೇರಿಸಿಕೊಟ್ಟಿರುವುದು ವಿಶೇಷ.

ಪ್ರಕಾಶ್ ‘ಸಿದ್ಧಾರ್ಥ’ ಚಿತ್ರದ ನಿರ್ದೇಶಕರು. ‘ಮಿಲನ’ದಂಥ ವಿಶಿಷ್ಟ ಚಿತ್ರವನ್ನು ನಿರ್ದೇಶಿಸಿದ್ದ ಪ್ರಕಾಶ್, ‘ಖುಷಿ’, ‘ಗೋಕುಲ’ದಂಥ ಭಿನ್ನ ಚಿತ್ರಗಳನ್ನು ರೂಪಿಸಿದವರು. ಅವರ ಪಾಲಿಗೀಗ ವಿನಯ್‌ರನ್ನು ತಿದ್ದಿತೀಡುವ ಕೆಲಸ. ಬೆಳ್ಳಿತೆರೆಯ ಈಚಿನ ಸಿನಿಮಾಗಳಲ್ಲಿ ಅಷ್ಟೇನೂ ಯಶಸ್ಸು ಗಳಿಸದ ಪ್ರಕಾಶ್ ಕಿರುತೆರೆ ಧಾರಾವಾಹಿಗಳಲ್ಲೂ ಕೆಲಸ ಮಾಡಿರುವುದಿದೆ. ಈಗ ವಿನಯ್ ರಾಜಕುಮಾರ್ ಅವರನ್ನು ನಾಯಕರಾಗಿ ನೆಲೆ ನಿಲ್ಲಿಸುವುದರ ಜೊತೆಗೆ ನಿರ್ದೇಶಕರಾಗಿ ಹೊಸ ಹುಟ್ಟು ಕಂಡುಕೊಳ್ಳಬೇಕಾದ ಅನಿವಾರ್ಯತೆಯೂ ಅವರಿಗಿದೆ.

■ ರಘು